**ಕರ್ನಾಟಕ ಸರ್ಕಾರ**

**ಸಾರಿಗೆ ಇಲಾಖೆ**

**ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,ಬಾಗೇಪಲ್ಲಿ ತನಿಖಾ ಠಾಣೆ, ಹೊಸಹುಡ್ಯ ಗ್ರಾಮ, ರಾಷ್ಟ್ರೀಯ ಹೆದ್ದಾರಿ –7, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.**

**ಮಾಹಿತಿ ಹಕ್ಕು ಅಧಿನಿಯಮ ೨೦೦೫ ೪(೧)(ಬಿ) ಪ್ರಕಾರ ಪ್ರಕಟಿಸಿರುವ ಮಾಹಿತಿ.(31/03/2021)**

## I. ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು.

ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯ ತನಿಖಾ ಠಾಣೆಯಾಗಿ, ಬೆಂಗಳೂರು–ಹೈದರಬಾದ್ ರಾಷ್ಟ್ರೀಯಹೆದ್ದಾರಿ–೭,ರಲ್ಲಿಬಾಗೇಪಲ್ಲಿತಾಲ್ಲೂಕು,ಹೊಸಹುಡ್ಯ ಗ್ರಾಮದ ಸರ್ವೆ ನಂ ೩೨೪ ಬಾಗೇಪಲ್ಲಿ ತನಿಖಾಠಾಣೆ ಎಂಬ ಹೆಸರಿನಿಂದ ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಿದೆ. ಜಂಟೀ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ–ಆಡಳಿತ) , ೧–ನೇ ಮಹಡಿ,ಸಾರಿಗೆ ಆಯುಕ್ತರ ಕಛೇರಿ,ಟಿ.ಟಿ.ಎಂ.ಸಿ. ಕಟ್ಟಡ,ಬೆಂಗಳೂರು ಇವರ ಮೇಲ್ವಿಚಾರಣೆ ಮತ್ತು ಜಂಟಿಸಾರಿಗೆ ಆಯುಕ್ತರು,ಬೆಂಗಳೂರು (ಗ್ರಾಮಾಂತರ) ವಿಭಾಗ,೪ನೇ ಮಹಡಿ,ಪೋಡಿಯಂ ಬ್ಲಾಕ್,ವಿ.ವಿ.ಗೋಪುರ,ಬೆಂಗಳೂರು–೫೬೦೦೦೧ ಇವರ ನೇರ ನಿಯಂತ್ರಣಕ್ಕೊಳಪಟ್ಟಿರುತ್ತದೆ.

**ಸಿಬ್ಬಂದಿ ವಿವರ**

ಈ ತನಿಖಾ ಠಾಣೆಯಲ್ಲಿ ಇಬ್ಬರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹುದ್ದೆ ಮತ್ತು ಒಂದು ಚಾಲಕನ ಹುದ್ದೆ ಖಾಯಂ ಆಗಿರುತ್ತದೆ. ಇನ್ನುಳಿದಂತೆ ಪ್ರವರ್ತನ ಸಿಬ್ಬಂದಿಯವರಾದ ಹಿರಿಯ ಮೋಟಾರು ವಾಹನ ನಿರೀಕ್ಷಕರು/ ಮೋಟಾರು ವಾಹನ ನಿರೀಕ್ಷಕರು ಮತ್ತು ಲಿಪಿಕ ವರ್ಗದ ಸಿಬ್ಬಂದಿಯನ್ನು ಆವರ್ತನದ ಮೇಲೆ ಜಂಟೀ ಸಾರಿಗೆ ಆಯುಕ್ತರು ನಿಯೋಜಿಸುತ್ತಾರೆ.

| | ಮಂಜೂರಾದ ಹುದ್ದೆ | ಕಾರ್ಯನಿರ್ವಹಣೆ | ಖಾಲಿ |
|---|---|---|---|
| ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | 02 | 00 | 02 |
| ವಾಹನ ಚಾಲಕ | 01 | 00 | 01 |

ಈ ತನಿಖಾ ಠಾಣೆಯಲ್ಲಿ ಕೈಗೊಳ್ಳುವ ಪ್ರಮುಖ ಕಾರ್ಯಗಳ ವಿವರಗಳು..

೧.ಹೊರರಾಜ್ಯದಿಂದ ಬರುವ ಸರಕು ಸಾಗಾಣಿಕೆ ವಾಹನ ಮತ್ತು ಪ್ರಯಾಣಿಕ ವಾಹನಗಳಿಗೆ ಕರ್ನಾಟಕ ರಾಜ್ಯದಲ್ಲಿ ತಾತ್ಕಾಲಿಕವಾಗಿ ಸಂಚರಿಸಲು ನಿಗಧಿತ ಶುಲ್ಕ ಮತ್ತು ತೆರಿಗೆ ಪಡೆದು ತಾತ್ಕಾಲಿಕ ಮತ್ತು ವಿಶೇಷ ಪರವಾನಿಗೆ ನೀಡುವುದು.

೨.ನಮ್ಮ ರಾಜ್ಯದ ವಾಹನಗಳು ತೆರಿಗೆ ಪಾವತಿಸದೆ ಬಾಕಿದಾರರಾಗಿದ್ದರೆ ಅವುಗಳ ಬಾಕಿ ತೆರಿಗೆ ವಸೂಲಾತಿ.

೩.ಮೋಟಾರು ವಾಹನ ನಿಯಮಗಳ ಜಾರಿ.

**II.ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು.**

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ತನಿಖಾ ಠಾಣೆಯ ಮುಖ್ಯಸ್ಥರಾಗಿದ್ದು ತನಿಖಾಠಾಣೆಯ ನೇರ ಮೇಲ್ವಿಚಾರರಾಗಿರುತ್ತಾರೆ.

ಹಿರಿಯ ಮೋಟಾರು ವಾಹನ ನಿರೀಕ್ಷಕರು/ ಮೋಟಾರು ವಾಹನ ನಿರೀಕ್ಷಕರು ಮೋಟಾರು ವಾಹನ ಕಾಯ್ದೆ 1988 ರ ಅಧಿನಿಯಮ 213(5) ಮತ್ತು ಕರ್ನಾಟಕ ಮೋಟಾರು ವಾಹನಗಳ ನಿಯಮ 1989ರ ನಿಯಮ 259(2) ರಲ್ಲಿ ತಿಳಿಸಿರುವ ಕರ್ತವ್ಯಗಳು.

ಗುಮಾಸ್ತ,ದಿನವಹಿ ಪ್ರವರ್ತನ ಸಿಬ್ಬಂದಿಯು ವಸೂಲು ಮಾಡಿದ ರಾಜಸ್ವ ಸಂಗ್ರಹಣೆಯ ತಪಾಸಣೆ ಮಾಡಿ ಸರ್ಕಾರಕ್ಕೆ ಜಮಾ ಮಾಡುವುದು.

ಜವಾನರು( ಡಿ–ವರ್ಗದ ನೌಕರರು) ಕಛೇರಿಯ ಕಾರ್ಯದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿರ್ದೇಶಿಸುವ ಕೆಲಸಗಳ ನಿರ್ವಹಣೆ.

**III. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ.**

(ಅ) ವಿಷಯ ನಿರ್ವಾಹಕರ ಹಂತದಲ್ಲಿ ಕಡತಗಳ ಮತ್ತು ದಾಖಲೆಗಳ ನಿರ್ವಹಣೆ ಮತ್ತು ಸಂಗ್ರಹಿಸಿದ ರಾಜಸ್ವದ ಪರಿಶೀಲನೆ ಮತ್ತು ಸರ್ಕಾರಕ್ಕೆ ಜಮಾ ಮಾಡುವುದು.

(ಆ) ಪ್ರವರ್ತನ ಕಾರ್ಯ ಹಿರಿಯ ಮೋಟಾರು ವಾಹನ ನಿರೀಕ್ಷಕರು/ ಮೋಟಾರು ವಾಹನ ನಿರೀಕ್ಷಕರು ಮೋಟರು ವಾಹನಗಳ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಮತ್ತು ಅವರು ನಿರ್ವಹಿಸಿದ ಕಾರ್ಯಭಾರವನ್ನು ಸಂಗ್ರಹಿಸಿದ ರಾಜಸ್ವವನ್ನು ಮತ್ತು ವಿವರಗಳನ್ನು ಕಛೇರಿಗೆ ಸಲ್ಲಿಸುವ ಜವಾಬ್ದಾರಿ ಹೊಂದಿರುತ್ತಾರೆ.

**VI.ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರ.**

೧.ಮೋಟಾರು ವಾಹನಗಳ ಕಾಯ್ದೆ 1988.

೨.ಕೇಂದ್ರ ಮೋಟಾರು ವಾಹನಗಳ ನಿಯಮ 1989.

೩. ಕರ್ನಾಟಕ ಮೋಟಾರು ವಾಹನಗಳ ನಿಯಮ 1989.

೪. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957.

೫ .ಆಗಿಂದಾಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊರಡಿಸುವ ಆದೇಶಗಳು,ಅಧಿಸೂಚನೆಗಳು ಇವುಗಳನ್ನುಕರ್ತವ್ಯ ನಿರ್ವಹಣೆಯಲ್ಲಿ ಪಾಲಿಸಲಾಗುತ್ತದೆ.

**V.ಕಛೇರಿಯು ನಿರ್ವಹಿಸುವ ಅಥವಾ ಅದರ ಅಧೀನದಲ್ಲಿರು ಅಥವಾ ಅದರ ಸಿಬ್ಬಂದಿಯು ಕೆಲಸಗಳ ನಿರ್ವಹಣೆಗಾಗಿ ಪಾಲಿಸುವ ನಿಯಮಗಳು, ಕಾನೂನುಗಳು,ನಿರ್ದೇಶನಗಳು ಮ್ಯಾನ್ಯುಯಲ್‌ಗಳುಮತ್ತು ದಾಖಲೆಗಳು.**

೧.ಮೋಟಾರು ವಾಹನಗಳ ಕಾಯ್ದೆ 1988.

೨.ಕೇಂದ್ರ ಮೋಟಾರು ವಾಹನಗಳ ನಿಯಮ 1989.

೩. ಕರ್ನಾಟಕ ಮೋಟಾರು ವಾಹನಗಳ ನಿಯಮ 1989.

೪. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957.

೫.ಆಗಿಂದಾಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊರಡಿಸುವ ಆದೇಶಗಳು,ಅಧಿಸೂಚನೆಗಳು ಇವುಗಳನ್ನು ಕರ್ತವ್ಯ ನಿರ್ವಹಣೆಯಲ್ಲಿ ಪಾಲಿಸಲಾಗುತ್ತದೆ.

**vi. ಕಛೇರಿಯು ಹೊಂದಿರುವ ಅಥವಾ ಅದರ ಅಧೀನದಲ್ಲಿರುವ ದಾಖಲೆಗಳ ಪಟ್ಟಿ.**

೧.ಅಧಿಕಾರಿಗಳ /ಸಿಬ್ಬಂದಿ ಹಾಜರಾತಿ ಪುಸ್ತಕ.

೨. ಅಧಿಕಾರಿಗಳ /ಸಿಬ್ಬಂದಿಗಳ ಹಣ ಘೋಷಣೆ ವಹಿ.

೩. ಅನುದಾನ ಬಿಡುಗಡೆ ಮತ್ತು ವೆಚ್ಚದ ವಹಿ.

೪.ವೇತನ ಪಾವತಿ ವಹಿ.

೫. ರಾಜಸ್ವ ವಸೂಲಾತಿ ವಿವರಗಳ ವಹಿ ( ತೆರಿಗೆ ಮತ್ತು ಶುಲ್ಕ )

೬. ರಾಜಸ್ವ ವಸೂಲಾತಿ ವಿವರಗಳ ವಹಿ (ದಂಡ )

೭.ತಾತ್ಕಾಲಿಕ ಪರವಾನಿಗೆ ನೀಡಿಕೆ ವಹಿ.

೮.ವಿಶೇಷ ಪರವಾನಿಗೆ ನೀಡಿಕೆ ವಹಿ.

೯.ಕಛೇರಿ ನಗದು ವಹಿ.

೧೦.ರಾಜಸ್ವ ಬ್ಯಾಂಕಿಗೆ ಜಮಾ ಮಾಡಿದ ವಹಿ.

೧೧.ಪೀಠೋಪಕರಣ ದಾಸ್ತಾನು ವಹಿ.

೧೨. ಎ–ಚಲನ್,ಬಿ–ಚಲನ್,ಸಿ.ಆರ್. ಮತ್ತು ಸಿ.ಆರ್.ಆರ್.ದಾಸ್ತಾನು ವಹಿ.

೧೩. ಗಣಕೀಕೃತ ಚಲನ್ ದಾಸ್ತಾನು ವಹಿ.

೧೪. ಡಿ.ಸಿ.ಬಿಲ್ಲುಗಳ ವಹಿ.

೧೫.ತನಿಖಾ ಠಾಣೆಯ ವಿದ್ಯುತ್‌ಚ್ಛಕ್ತಿಬಿಲ್ ಪಾವತಿ ಕಡತ.

೧೬.ತನಿಖಾ ಠಾಣೆಯ ದೂರವಾಣಿ ಬಿಲ್ ಪಾವತಿ ಕಡತ.

೧೭.ತನಿಖಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ ಗೃಹರಕ್ಷಕ ಸಿಬ್ಬಂದಿಯ ದಿನಭತ್ಯೆ ಪಾವತಿ ಕಡತ

೧೮. ಮಾಹಿತಿ ಹಕ್ಕು ಅಧಿನಿಯಮ ಕಡತ.

೧೯.ಸಾಮಾನ್ಯ ಪತ್ರ ವ್ಯವಹಾರಗಳ ಕಡತ.

೨೦.ವಾರ್ಷಿಕ ಗುರಿ ನಿಗಧಿ ಮತ್ತು ಸಾಧಿಸಿದ ಗುರಿ ವಿವರಗಳು ಮತ್ತು ತನಿಖಾ ಠಾಣೆಯಲ್ಲಿ ಕಾರ್ಯ ನಿರ್ವಹಿಸಿದ ಸ.ಪ್ರಾ.ಸಾ.ಅಧಿಕಾರಿಗಳ ವಿವರ.

**vii. ನಿಯಮಗಳ ರಚನೆ ಅಥವಾ ಅವುಗಳ ಅನುಷ್ಠಾನದಲ್ಲಿ ಸಾರ್ವಜನಿಕರೊಂದಿಗೆ ಸಮಾಲೋಚನೆ,ಪಾಲ್ಗೊಳ್ಳುವಿಕೆ ಅಥವಾ ಅಭಿಪ್ರಾಯ ಪಡೆಯಲು ಇರುವ ವ್ಯವಸ್ಥೆ.**

ಸರ್ಕಾರದ ಮಟ್ಟದಲ್ಲಿ ನಿಯಮಾವಳಿ ರಚನೆಯಾಗಿರುತ್ತದೆ.

**viii. ಕಛೇರಿಯ ಅಂಗವಾಗಿ ರಚಿಸಿರುವ ನಿಗಮ,ಮಂಡಳಿ, ಸಮಿತಿ ಅಥವಾ ಇನ್ನಾವುದೇ ಪ್ರಾಧಿಕಾರಗಳ ಪಟ್ಟಿ,ಅವುಗಳ ಸಭೆಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳಲು ಅಥವಾ ಅವುಗಳ ನಡಾವಳಿಗಳು ಸಾರ್ವಜನಿಕರಿಗೆಲಭ್ಯವಾಗುವ ಸಾಧ್ಯತೆ.**

ರಾಜ್ಯ ಸಾರಿಗೆ ಪ್ರಾಧಿಕಾರ/ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳೂ ಅಸ್ತಿತ್ವದಲ್ಲಿರುತ್ತದೆ.

**ix. ಅಧಿಕಾರಿಗಳ ಸೂಚಿ.**

**ಅ)** ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ: ಕಛೇರಿ ಮುಖ್ಯಸ್ಥರು ಮತ್ತು ಕಛೇರಿಯ ಆಡಳಿತ ಮೇಲ್ವಿಚಾರಣೆ ಮತ್ತು ರಾಜಸ್ವ ಸಂಗ್ರಹಣೆಯನ್ನು ಸರ್ಕಾರದ ಖಜಾನೆಗೆ ಜಮೆಯ ಪರಿಶೀಲನೆ ಮತ್ತು ಕೇಂದ್ರ ಕಛೇರಿ ಹಾಗೂ ಇತರೆ ಕಛೇರಿಗಳ ಪತ್ರ ವ್ಯವಹಾರ,ಮಾಹಿತಿ ಒದಗಿಸುವುದು,ಪರಿಶೀಲನಾ ಸಭೆಗಳಿಗೆ ಹಾಜರಾಗುವುದು.ಸಾರ್ವಜನಿಕ ಸಂಪರ್ಕಾಧಿಕಾರಿ/ ಸಾರ್ವಜನಿಕ ಮಾಹಿತಿ ಅಧಿಕಾರಿಯ ಕಾರ್ಯ ನಿರ್ವಹಣೆ.

**ಆ)** ಹಿರಿಯ ಮೋಟಾರು/ಮೋಟಾರು ವಾಹನ ನಿರೀಕ್ಷಕರು: ತನಿಖಾ ಠಾಣೆಯಲ್ಲಿ ಕರ್ನಾಟಕ ರಾಜ್ಯ ಪ್ರವೇಶಿಸುವ ವಾಹನಗಳ ದಾಖಲಾತಿಗಳನ್ನು ಪರಿಶೀಲಿಸುವುದು ಮತ್ತು ವಾಹನ ಅಧಿನಿಯಮ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಜಾರಿಗೊಳಿಸಿರುವುದನ್ನು ಪರಿಶೀಲಿಸಿ ನಿಯಮ ಉಲ್ಲಂಘಿಸಿರುವ ವಾಹನದ ಪ್ರಕರಣಗಳನ್ನು ದಾಖಲಿಸಿ ಸರ್ಕಾರವು ನಿಗಧಿಪಡಿಸಿರುವ ದಂಡ ಮತ್ತು ತೆರಿಗೆ ವಸೂಲು ಮಾಡಿ ವಾಹನಗಳಿಗೆ ಕರ್ನಾಟಕ ರಾಜ್ಯದಲ್ಲಿ ತಾತ್ಕಾಲಿಕವಾಗಿ ಸಂಚರಿಸಲು ನಿಗಧಿತ ಶುಲ್ಕ ಮತ್ತು ತೆರಿಗೆ ಪಡೆದು ತಾತ್ಕಾಲಿಕ ಮತ್ತು ವಿಶೇಷ ಪರವಾನಿಗೆ ನೀಡುವುದು.

**ಇ)** ವಿಷಯ ನಿರ್ವಾಹಕರು: ಕಡತಗಳು/ಚಲನ್ ಪುಸ್ತಕಗಳನ್ನು ನಿರ್ವಹಿಸುವುದು/ರಾಜಸ್ವ ಜಮೆ ಮಾಡುವುದು/ರಹದಾರಿ ನೀಡುವುದು/ಪತ್ರ ವ್ಯವಹಾರ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿರ್ದೇಶಿಸುವ ಕೆಲಸ ಕಾರ್ಯಗಳು.

**ಈ)** ಗ್ರೂಪ್–ಡಿ ನೌಕರರು: ಬ್ಯಾಂಕಿಗೆ ಹೋಗಿ ರಾಜಸ್ವ ಜಮೆ ಮಾಡುವುದು ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿರ್ದೇಶಿಸುವ ಕೆಲಸ ಕಾರ್ಯಗಳು.

| ಕ್ರ.ಸಂ. | ಅಧಿಕಾರಿ/ಸಿಬ್ಬಂದಿಯ ಹೆಸರು ಮತ್ತು ಪದನಾಮ |
|---|---|
| ೦೧. | ಶ್ರೀ ಎಸ್.ಮಂಜುನಾಥ, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ.(ಪ್ರಭಾರ) |

**x.** ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿ ಪಡೆಯುವ ಮಾಸಿಕ ಸಂಬಳ ಮತ್ತು ನಿಯಮಗಳ ಪ್ರಕಾರ ಪಡೆಯುವ ಪರಿಹಾರ.

| ಕ್ರ.ಸ. | ಅಧಿಕಾರಿ/ಸಿಬ್ಬಂದಿಯ ಹೆಸರು ಮತ್ತು ಪದನಾಮ | ಮೂಲ ವೇತನ | ತುಟ್ಟಿಭತ್ಯೆ. | ಮ.ಬಾ.ಭ. | ಇತರೆ. | ಒಟ್ಟು |
|---|---|---|---|---|---|---|
| ೦೧. | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ. | ಖಾಲಿ | -- | -- | --- | --- |
| ೦೨ | ಚಾಲಕ | ಖಾಲಿ | | | | |

ಸಾರಿಗೆ ಆಯುಕ್ತರು ಪ್ರತಿ ಮಾಹೆ ಈ ತನಿಖಾ ಠಾಣೆಯಲ್ಲಿ ಕಾರ್ಯನಿರ್ವಹಿಸಲು ತನಿಖಾಧಿಕಾರಿಗಳನ್ನು ಆವರ್ತನದ ಮೇಲೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕೋಲಾರ ಇಲ್ಲಿಂದ

ನಿಯೋಜಿಸುತ್ತಾರೆ.ಗ್ರೂಪ್–ಡಿ ನೌಕರರನ್ನು ಸಹ ಆವರ್ತನದ ಮೇಲೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಿಂದ ನಿಯೋಜನೆ ಮಾಡುತ್ತಾರೆ.

**xi. ಎಲ್ಲಾ ಯೋಜನೆಗಳಿಗೆ ಹಂಚಿಕೆಯಾಗಿರುವ ಅನುದಾನ ಸಂಭವನೀಯ ವೆಚ್ಚ ಮತ್ತು ವಿತರಣೆ ಮಾಡಿದ ವರದಿಗಳು.**

**ಲೆಕ್ಕ ಶೀರ್ಷಿಕೆ-೨೦೪೧–ಮೋಟಾರು ವಾಹನ ತೆರಿಗೆಗಳು–2041-00-001-0-01.**

| ಆರ್ಥಿಕ ವರ್ಷ | ಲೆಕ್ಕ ಶೀರ್ಷಿಕೆ | ಮಾಡಲಾದ ವೆಚ್ಚ |
|---|---|---|
| 2020-21 | ೦೭೧.ಕಟ್ಟಡ ವೆಚ್ಚಗಳು– | 95254=00 |
| | ೦೫೧–ಕಛೇರಿ ವೆಚ್ಚಗಳು– | 680734=00 |
| | ೧೯೫–ಇಂದನ ವೆಚ್ಚ | 148320=00 |
| | | |

**xii. ಸಹಾಯ ಧನ ನೀಡುವ ಕಾರ್ಯ ಕ್ರಮಗಳು, ಮೊತ್ತ ಮತ್ತು ಫಲಾನುಭವಿಗಳ ಪಟ್ಟಿ.**

ಯಾವುದೂ ಇಲ್ಲಾ.

**xiii. ವಿನಾಯಿತಿಗಳು ಮತ್ತು ಅನುಮತಿಗಳನ್ನು ಪಡೆದಿರುವ ಫಲಾನುಭವಿಗಳ ಪಟ್ಟಿ**

ತನಿಖಾ ಠಾಣೆಗೆ ಅನ್ವಯಿಸುವುದಿಲ್ಲ.

**xiv. ಕಛೇರಿಯಲ್ಲಿರುವ ಮತ್ತು ಹೊಂದಿರುವ ಮಾಹಿತಿಯನ್ನು ಗಣಕೀಕರಣ ಗೊಳಿಸಿರುವ ಬಗ್ಗೆ ವಿವರ.**

ಈ ತನಿಖಾ ಠಾಣೆಯಲ್ಲಿ ನೀಡಿರುವ ಎಲ್ಲಾ ವಿಶೇಷ ಮತ್ತು ತಾತ್ಕಾಲಿಕ ಪರವಾನಿಗೆಗಳು.

**xv. ಸಾರ್ವಜನಿಕರು ಮಾಹಿತಿ ಪಡೆಯಲು ಒದಗಿಸಿರುವ ಸೌಲಭ್ಯಗಳು ಮತ್ತು ಸಾರ್ವಜನಿಕ ಉಪಯೋಗಕ್ಕೆ ಗ್ರಂಥಾಲಯ ಅಥವಾ ವಾಚನಾಲಯ ಒದಗಿಸಿದ್ದಲ್ಲಿ ಅದರ ಕೆಲಸದ ಸಮಯ.**

ಸಾರ್ವಜನಿಕರು ಮಾಹಿತಿ ಪಡೆಯಲು ಬೆಳಿಗ್ಗೆ 10-00 ರಿಂದ ಸಂಜೆ 5=30 ರವರೆಗೆ ಊಟದ ವೇಳೆ 1-30 ರಿಂದ 2-15. ಸಾರ್ವಜನಿಕ ಮತ್ತು ರಾಷ್ಟ್ರೀಯ ರಜಾ ದಿನಗಳನ್ನು ಹೊರತು ಪಡಿಸಿ.

**xvi. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಇತರೆ ವಿವರಗಳು.**

| ಕ್ರ.ಸಂ. | ಸಾರ್ವಜನಿಕ ಪ್ರಾಧಿಕಾರ | ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ | ಮೇಲ್ಮನವಿ ಪ್ರಾಧಿಕಾರ. |
|---|---|---|---|---|
| ೦೧. | ಸಾರಿಗೆ ಆಯುಕ್ತರು, ೧ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ. ಬೆಂಗಳೂರು–೨೭ | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬಾಗೇಪಲ್ಲಿತನಿಖಾ ಠಾಣೆ | ಹಿರಿಯ ಮೋಟಾರು/ ಮೋಟಾರು ವಾಹನ ನಿರೀಕ್ಷಕರು. | ಜಂಟಿ ಸಾರಿಗೆ ಆಯುಕ್ತರು. ಬೆಂಗಳೂರು(ಗ್ರಾ)ವಿಭಾಗ. ೪ನೇಮಹಡಿ,ಪೋಡಿಯಂ ಬ್ಲಾಕ್,ವಿ.ವಿ.ಗೋಪುರ ಬೆಂಗಳೂರು–೦೧ |

**xvii. ಇತರೆ ಮಾಹಿತಿಗಳು ಮತ್ತು ನಂತರ ಪ್ರತಿ ವರ್ಷ ಮಾಹಿತಿಯನ್ನು ಅಪ್ ಡೇಟ್ ಮಾಡುವುದು.**

ಪ್ರತಿ ವರ್ಷ ಮಾಹಿತಿಯನ್ನು ಅಪ್ ಡೇಟ್ ಮಾಡಲಾಗುವುದು.

**ಸಾರಿಗೆ ಇಲಾಖೆಯ ವೆಬ್ ಸೈಟ್ –** https:// transport.karnataka.gov.in/

**ಇ–ಮೇಲ್. –** **ckpgl-rto-ka@nic.in**

**kummy2345@gmail.com.**

**ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು**

**ಬಾಗೇಪಲ್ಲಿ ತನಿಖಾಠಾಣೆ,ಬಾಗೇಪಲ್ಲಿ**